5

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ-478/2019/ಡಿ.ಆರ್.ಇ-2

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 31/08/2019

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಕೊಟ್ಟೂರನಕೊಟ್ಟಿಗೆ ಗ್ರಾಮದ ಪತ್ರ ಸಂಖ್ಯೆ: 889/282/372ರಲ್ಲಿ ಅನಧಿಕೃತವಾಗಿ ಕಟ್ಟಿರುವ ಕಟ್ಟಡವನ್ನು ತೆರೆವುಗೊಳಿಸಲು ಸೂಕ್ತ ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ.

*****

ಶ್ರೀ ಕೆ.ಎಂ.ನಾಗರಾಜು, ಪ್ರಧಾನ ಕಾರ್ಯದರ್ಶಿ, ತುರುವೇಕೆರೆ ಒಕ್ಕಲಿಗರ ಸಂಘ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ, ವಾಸ: ಕೋಲಾಲ ಗ್ರಾಮ, ಕೊಡಿಗೇಹಳ್ಳಿ ಅಂಚೆ, ತುರುವೆಕೆರೆ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ಶ್ರೀ ಜಿ.ಡಿ.ಗಂಗಾಧರನ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ, ಹಾಲಿ ಕಾರ್ಯನಿರ್ವಾಹಕ ಅಧಿಕಾರಿಗಳು, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ ಮತ್ತು, (2) ಶ್ರೀ ಚಂದ್ರಶೇಖರ್ ಎಂ.ಎಲ್., ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕೊಡಿಗೇಹಳ್ಳಿ ಗ್ರಾಮ ಪಂಚಾಯತ್, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ '1 ಮತ್ತು 2ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

11/9

2. ದೂರಿನ ಸಂಕ್ಷಿಪ್ತ ವಿವರ: ತುರುವೇಕೆರೆ ತಾಲ್ಲೂಕು ಕೊಡಿಗೇಹಳ್ಳಿ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ರಾಘವೇಂದ್ರ ನಗರ ದಬ್ಬೇಘಟ್ಟ ರಸ್ತೆಯಲ್ಲಿ ತುರುವೇಕೆರೆ ಒಕ್ಕಲಿಗರ ಸಂಘಕ್ಕೆ ಸೇರಿದ ಶ್ರೀ ಬಾಲಗಂಗಾಧರನಾಥ ಸಮುದಾಯ ಭವನ ಇದ್ದು, ಅದಕ್ಕೆ ಲಗತ್ತಿಸಿ ಪೂರ್ವ-ಪಶ್ಚಿಮ 50 ಅಡಿ ಉತ್ತರ-ದಕ್ಷಿಣ 150 ಅಡಿ ಸಂಘಕ್ಕೆ ಸೇರಿದ ನಿವೇಶನ ಇರುತ್ತದೆ. ಸದರಿ ನಿವೇಶನಕ್ಕೆ ಹೋಗಲು 18

N. Anand

ಅಡಿ ರಸ್ತೆ ಬಿಟ್ಟಿರುತ್ತಾರೆ. ಶ್ರೀ ವೆಂಕಟೇಶಮೂರ್ತಿ ಬಿನ್ ಲೇಟ್ ಶಿವರಾಮು ಎನ್ನುವವರು ಅಕ್ರಮವಾಗಿ ಪಂಚಾಯತಿಯಿಂದ ಲೈಸೆನ್ಸ್ ಪಡೆಯದೇ ರಸ್ತೆಯನ್ನು ಒತ್ತುವರಿ ಮಾಡಿ 4 ಅಂತಸ್ತಿನ ಕಟ್ಟಡ ನಿರ್ಮಿಸಿರುತ್ತಾರೆ, ಈ ಬಗ್ಗೆ ಕೊಡಿಗೇಹಳ್ಳಿ ಗ್ರಾಮ ಪಂಚಾಯತಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರಿಗೆ ದೂರು ನೀಡಿದ್ದರೂ ಸದರಿಯವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಆಪಾದಿಸಿರುತ್ತಾರೆ. ಕಾರಣ ಎದುರುದಾರರ ವಿರುದ್ಧ ಸೂಕ್ತ ಕ್ರಮಕೈಗೊಳ್ಳಲು ಕೋರಿರುತ್ತಾರೆ.

3. ದೂರಿನ ಜೊತೆಗೆ, ದಿನಾಂಕ: 04/09/2017 ರಂದು 2ನೇ ಎದುರುದಾರರು 1ನೇ ಎದುರುದಾರರಿಗೆ ನೀಡಿದ ಹಿಂಬರಹದ ಪ್ರತಿ, ವೆಂಕಟೇಶ್ ಮೂರ್ತಿ ಬಿನ್ ಲೇಟ್ ಶಿವರಾಮು ಎನ್ನುವವರ ಕಟ್ಟಡದ ತೆರಿಗೆ ನಿರ್ಧರಣಾ ಪಟ್ಟಿಯ ನಕಲು, ದಿನಾಂಕ: 02/02/2017 ರಂದು ಕೊಡಿಗೇಹಳ್ಳಿ ಗ್ರಾಮ ಪಂಚಾಯತಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರಿಗೆ ನೀಡಿದ ದೂರಿನ ಪ್ರತಿ, 2ನೇ ಎದುರುದಾರರು ನೀಡಿದ ದೃಢೀಕರಣ ಪತ್ರದ ಪ್ರತಿ, ದಿನಾಂಕ: 26/07/2017 ರಂದು 1ನೇ ಎದುರುದಾರರಿಗೆ ನೀಡಿದ ದೂರಿನ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

4. ದೂರುದಾರರು ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಿ ಎದುರುದಾರರ ಆಕ್ಷೇಪಣೆಗಳನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿ ಅದರಲ್ಲಿ, ಶ್ರೀ ವೆಂಕಟೇಶ್ ಮೂರ್ತಿ ಬಿನ್ ಲೇಟ್ ಶಿವರಾಮಯ್ಯ ಎಂಬುವವರು ಕೊಟ್ಟಿರನ್‌ಕೊಟ್ಟಿಗೆ ಗ್ರಾಮದ ಕ್ರಮ ಸಂಖ್ಯೆ: 889/282/372ರಲ್ಲಿ ಗ್ರಾಮ ಪಂಚಾಯತಿಯ ಗಮನಕ್ಕೆ ಬಾರದಂತೆ ಹಾಗೂ ಗ್ರಾಮ ಪಂಚಾಯತಿಯಿಂದ ಕಟ್ಟಡ ರಚನೆ ಹಾಗೂ ವಿನ್ಯಾಸಕ್ಕೆ ಮತ್ತು ನವೀಕರಣಕ್ಕಾಗಿ ಯಾವುದೇ ಲೈಸನ್ಸ್ ಹಾಗೂ ಅನುಮತಿ ಪಡೆಯದೇ ಅಕ್ರಮ ಕಟ್ಟಡ ನಿರ್ಮಾಣ ಮಾಡಿರುತ್ತಾರೆ. ಸ್ಥಳ ತನಿಖೆ ಮಾಡಿದಾಗ 40 x 30 ಅಡಿ ನಿವೇಶನದ ಅಳತೆವುಳ್ಳ ಜಾಗದ ಬದಲಾಗಿ ಅಕ್ರಮವಾಗಿ 48 x 29.9 ಅಡಿ ವಿಸ್ತೀರ್ಣದಲ್ಲಿ ಕಟ್ಟಡ ನಿರ್ಮಾಣ ಮಾಡಿರುವುದು ಕಂಡುಬಂದಿದೆ. ಈ ಬಗ್ಗೆ ಸದರಿ ಅನಧಿಕೃತವಾಗಿ ಕಟ್ಟಡವನ್ನು ತೆರವುಗೊಳಿಸುವಂತೆ ಶ್ರೀ ವೆಂಕಟೇಶ್ ಮೂರ್ತಿ ಇವರಿಗೆ ನೋಟಿಸ್ ನೀಡಲಾಗಿದೆಯೆಂದು ವರದಿ ಸಲ್ಲಿಸಿ, ವರದಿಯೊಂದಿಗೆ ದಿನಾಂಕ: 25/04/2019 ರಂದು ಶ್ರೀ ವೆಂಕಟೇಶ್ ಮೂರ್ತಿ ರವರಿಗೆ ನೀಡಿದ ನೋಟಿಸ್ ದಿನಾಂಕ: 04/09/2017 ರಂದು ದೂರುದಾರರಿಗೆ 2ನೇ ಎದುರುದಾರರು ನೀಡಿದ ಹಿಂಬರಹ, ದಿನಾಂಕ: 05/09/2017 ರಂದು 1ನೇ ಎದುರುದಾರರಿಗೆ 2ನೇ ಎದುರುದಾರರು ಬರೆದ

ಪತ್ರ, ದಿನಾಂಕ; 09/06/2016 ರಂದು ಶ್ರೀ ವೆಂಕಟೇಶ್ ಮೂರ್ತಿ ಇವರ ಸ್ವತ್ತಿನ ಕ್ರಯ ಪತ್ರದ ಪ್ರತಿಯನ್ನು ಹಾಜರುಪಡಿಸಿದ್ದಾರೆ.

5. ದೂರುದಾರರು ಹಾಗೂ ಎದುರುದಾರರು ಹಾಜರುಪಡಿಸಿರುವ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ದೂರುದಾರರು ಈ ದೂರು ಸಲ್ಲಿಸುವ ಪೂರ್ವದಲ್ಲಿಯೇ ದಿನಾಂಕ: 02/02/2017 ರಂದು ಶ್ರೀ ವೆಂಕಟೇಶ್ ಮೂರ್ತಿ ಇವರು ನಿವೇಶನ ಸಂಖ್ಯೆ: 100ನ್ನು ಖರೀದಿ ಮಾಡಿದ್ದು, ಕಟ್ಟಡ ಮಾಡಿರುತ್ತಾರೆ. ಆ ನಿವೇಶನದ ಹಿಂಬಾಗದಲ್ಲಿರುವ ನಿವೇಶನ ನಂ. 9 ಮತ್ತು 10 ಸಂಖ್ಯೆಯ ನಿವೇಶನಗಳನ್ನು ತಮ್ಮ ಸಂಘ ಖರೀದಿಸಿದ್ದು, ನಿವೇಶನ ನಂ. 3, 9 ಮತ್ತು 10ರ ಮಧ್ಯೆ 18 ಅಡಿ ರಸ್ತೆ ಇದ್ದು, ಶ್ರೀ ವೆಂಕಟೇಶ್ ಮೂರ್ತಿ ರವರು ಅತಿಕ್ರಮವಾಗಿ ಕಟ್ಟಡ ನಿರ್ಮಾಣ ಮಾಡುತ್ತಿರುತ್ತಾರೆ. ಖುದ್ದು ಸ್ಥಳ ಪರಿಶೀಲಿಸಿ ತೆರೆವುಗೊಳಿಸುವಂತೆ ಅಧ್ಯಕ್ಷರು/ಕಾರ್ಯದರ್ಶಿಗಳು, ಗ್ರಾಮ ಪಂಚಾಯತ್, ಕೊಡಿಗೇಹಳ್ಳಿ ಇವರಿಗೆ ದೂರುದಾರರು ದೂರು ಸಲ್ಲಿಸಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಅದು ಅಲ್ಲದೇ, ದಿನಾಂಕ: 24/07/2017 ರಂದು 2ನೇ ಎದುರುದಾರರು ನೀಡಿರುವ ದೃಢೀಕರಣ ಪತ್ರವನ್ನು ಪರಿಶೀಲಿಸಿದಾಗ, ಕೊಟ್ಟರನಕೊಟ್ಟಿಗೆ ಗ್ರಾಮದ ಪತ್ರ ಸಂಖ್ಯೆ: 880/282/372ರ ಕಟ್ಟಡಕ್ಕೆ ಗ್ರಾಮ ಪಂಚಾಯತಿಯವರು ಕಟ್ಟಡ ಲೈಸನ್ಸ್ ನೀಡಿಲ್ಲವೆಂದು ಕಂಡುಬರುತ್ತದೆ. ಅದು ಅಲ್ಲದೇ, ದಿನಾಂಕ: 26/07/2017ರ ಶ್ರೀ ಕೆ.ಎಂ.ನಾಗರಾಜು, ಕಾರ್ಯದರ್ಶಿ 1ನೇ ಎದುರುದಾರರಿಗೆ ಬರೆದಿರುವ ಪತ್ರವನ್ನು ಪರಿಶೀಲಿಸಿದಾಗ ಶ್ರೀ ವೆಂಕಟೇಶ್ ಮೂರ್ತಿ ಇವರು ಅಕ್ರಮವಾಗಿ ಕಟ್ಟಿರುವ ಕಟ್ಟಡವನ್ನು ಸ್ಥಳ ಪರಿಶೀಲಿಸಿ ತೆರೆವುಗೊಳಿಸಲು ಕೋರಿದ್ದು ಕಂಡುಬರುತ್ತದೆ.

6. ಹೀಗಿದ್ದರೂ ಸಹಿತ ಇಲ್ಲಿಯವರೆಗೆ ಎದುರುದಾರರು ದಿನಾಂಕ: 27/04/2019 ರಂದು ಶ್ರೀ ವೆಂಕಟೇಶ್ ಮೂರ್ತಿ ರವರಿಗೆ ನೋಟಿಸ್ ನೀಡಿದ್ದನ್ನು ಬಿಟ್ಟರೆ ದೂರುದಾರರು ಈ ಹಿಂದೆ ದೂರು ನೀಡಿದ ನಂತರ, ಶ್ರೀ ವೆಂಕಟೇಶ್ ಮೂರ್ತಿ ರವರು ಗ್ರಾಮ ಪಂಚಾಯತ್‌ನಿಂದ ಅಧಿಕೃತ ಕಟ್ಟಡ ಪರವಾನಗಿ ಪಡೆಯದೇ ಕಟ್ಟಡ ಕಾಮಗಾರಿ ಮಾಡಿದ್ದು ಗೊತ್ತಿದ್ದರೂ ಸಹಿತ ಎದುರುದಾರರು ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಅದು ಅಲ್ಲದೇ, ಎದುರುದಾರರೇ ಹಾಜರುಪಡಿಸಿರುವ ಆಕ್ಷೇಪಣೆ ಮತ್ತು ದಾಖಲೆಗಳಿಂದ ಸ್ಥಳ ತನಿಖೆ ಮಾಡಿದಾಗ ಶ್ರೀ ವೆಂಕಟೇಶ್ ಮೂರ್ತಿ ರವರು 40 x 30 ಅಡಿ ನಿವೇಶನದ ಅಳತೆವುಳ್ಳ ಜಾಗದ ಬದಲಾಗಿ ಅಕ್ರಮವಾಗಿ 48 x 29.9 ಅಡಿ ವಿಸ್ತೀರ್ಣದಲ್ಲಿ ಕಟ್ಟಡ ನಿರ್ಮಾಣ ಮಾಡಿರುವುದು ಕಂಡುಬಂದಿದೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್

ರಾಜ್ ಅಧಿನಿಯಮದ ಕಲಂ 64ರ ರೀತ್ಯಾ ಪಂಚಾಯತಿ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ಮಾಡಬೇಕಾದರೆ ನಿಗಧಿತ ನಮೂನೆಯಲ್ಲಿ ಅರ್ಜಿ, ಕಟ್ಟಡದ ನಕ್ಷೆ ಮತ್ತು ಅವಶ್ಯಕ ದಾಖಲೆಗಳನ್ನು ಸಲ್ಲಿಸಿ, ಲಿಖಿತ ಪರವಾನಗಿಯ ಮೇರೆಗೆ ಕಟ್ಟಡ ದುರಸ್ಥಿ, ನವೀಕರಣ ಅಥವಾ ಹೊಸ ಕಟ್ಟಡ ನಿರ್ಮಾಣ ಮಾಡಬೇಕಾಗುತ್ತದೆ. ಆದರೆ, ಈ ಪ್ರಸ್ತುತ ಪ್ರಕರಣದಲ್ಲಿ ಎದುರುದಾರರು ನೀಡಿರುವ ನೋಟಿಸ್‌ನಿಂದಲೇ ಶ್ರೀ ವೆಂಕಟೇಶ್ ಮೂರ್ತಿ ರವರು ಅಕ್ರಮವಾಗಿ ಹೆಚ್ಚು ವಿಸ್ತೀರ್ಣಕ್ಕೆ ಕಟ್ಟಡ ಕಟ್ಟಿದ್ದಾರೆ. ಈ ರೀತಿ ಅಕ್ರಮವಾಗಿ ಕಟ್ಟಡ ಕಟ್ಟಿದ್ದು, ತಮ್ಮ ಗಮನಕ್ಕೆ ಬಂದ ನಂತರ ಅದು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ ಕಲಂ 64ರ ರೀತ್ಯಾ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಎದುರುದಾರರು ಸದರಿ ಶ್ರೀ ವೆಂಕಟೇಶ್ ಮೂರ್ತಿ ರವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕಾಗಿತ್ತು. ಈ ರೀತಿಯಾಗಿ ಅಂದರೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ ಕಲಂ 64ಕ್ಕೆ ವ್ಯತಿರಿಕ್ತವಾಗಿ ಕಟ್ಟಡದ ರಿಪೇರಿ, ದುರಸ್ಥಿ ಅಥವಾ ಹೊಸ ಕಟ್ಟಡ ಕಟ್ಟಿದರೆ ಅದು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ ಕಲಂ 298(1)ರ ಅನ್ವಯ ಕ್ರಿಮಿನಲ್ ಅಪರಾಧವಾಗುತ್ತದೆ. ಸದರಿ ಅಪರಾಧಕ್ಕೆ ರೂ.5,000/- ವರೆಗಿನ ದಂಡವನ್ನು ವಿಧಿಸಬಹುದಾಗಿದೆ. ಈ ಪ್ರಕರಣದಲ್ಲಿ ಎದುರುದಾರರು ಶ್ರೀ ವೆಂಕಟೇಶ್ ಮೂರ್ತಿ ಕಾನೂನಿಗೆ ವ್ಯತಿರಿಕ್ತವಾಗಿ ಹೆಚ್ಚಿನ ವಿಸ್ತೀರ್ಣದಲ್ಲಿ ಕಟ್ಟಡ ನಿರ್ಮಾಣ ಮಾಡಿದ್ದಾಗಿ ಆತನ ವಿರುದ್ಧ ಎದುರುದಾರರು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ ಅನುಗುಣವಾಗಿ ಕ್ರಿಮಿನಲ್ ಪ್ರಕರಣವನ್ನು ದಾಖಲಿಸುವ ಅವಕಾಶವಿದ್ದರೂ ಸಹಿತ ಆ ಬಗ್ಗೆ ಕ್ರಮ ಜರುಗಿಸಿಲ್ಲ. ಆದ್ದರಿಂದ, ಎದುರುದಾರರು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ ಕಲಂ 64ರ ವ್ಯತಿರಿಕ್ತವಾಗಿ ಶ್ರೀ ವೆಂಕಟೇಶ್ ಮೂರ್ತಿ ಹೆಚ್ಚಿನ ವಿಸ್ತೀರ್ಣಕ್ಕೆ ಕಟ್ಟಡ ನಿರ್ಮಾಣ ಮಾಡಿದ್ದರೂ ಸಹಿತ ಆತನ ವಿರುದ್ಧ ಕಾನೂನಿನ ಪ್ರಕ್ರಿಯೆಯನ್ನು ಜರುಗಿಸದೇ ಕರ್ತವ್ಯ ಲೋಪ ಎಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

7. ಆದ್ದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, ಕೊಟ್ಟೂರನಕೊಟ್ಟಿಗೆ ಗ್ರಾಮದ ಪತ್ರ ಸಂಖ್ಯೆ: 889/282/372ರಲ್ಲಿ ಅನಧಿಕೃತವಾಗಿ ಕಟ್ಟಿರುವ ಕಟ್ಟಡವನ್ನು ತೆರವುಗೊಳಿಸಲು ಸೂಕ್ತ ಕ್ರಮ ಜರುಗಿಸಬೇಕಾಗಿ ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

8. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984, ಕಲಂ 12(2) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ಮುಟ್ಟಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

**[ನ್ಯಾಯಮೂರ್ತಿ ಎನ್. ಆನಂದ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**